ಅ.ದಾ. 14/2023 ಪಿಡಬ್ಲ್ಯೂ-1

ದಿನಾಂಕಃ 29.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 12 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:**

ನಿಪಿ-12 ರಿಂದ 16 ರ ಫೋಟೋದಲ್ಲಿ ಕೃಷಿ ಮಾಡಿರುವ ಕುರಿತು ಯಾವುದೇ ಪುರಾವೆ ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯು ಕ್ರಿಮಿನಲ್ ಅಪರಾಧ ಮಾಡಿದ್ದಲ್ಲಿ ಅವರು ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ಪೋಲಿಸರು ದಾಖಲಿಸುತ್ತಾರೆ ಎಂದರೆ ಸರಿ. ನಾನು ನೀಡಿದ ದೂರಿನ ಆಧಾರದ ಮೇಲೆ ಯಾವುದೇ ವ್ಯಕ್ತಿಯ ವಿರುದ್ದ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಗಿರುವುದಿಲ್ಲ ಎಂದರೆ ಸರಿ. ಹರೀಶ್, ಖತೀಜ, ಗಿರಿಜಮ್ಮ, ಸಾರಮ್ಮ, ಸರೋಜ, ಕೌಸರ್, ಯಮುನ ಮತ್ತು ಇತರರು ಕಿತ್ತಲೆಗಂಡಿ ವಾಸಿಗಳು ಎಂದರೆ ನನಗೆ ತಿಳಿದಿರುವುದಿಲ್ಲ. ನಾನು ಪೋಲಿಸರಿಗೆ ಕಿತ್ತಲೇಗಂಡಿ ಮತ್ತು ಕುಕ್ಕಳ್ಳಿಹರ ಗ್ರಾಮದ ವಾಸಿಗಳ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ದಾರದಹಳ್ಳಿ ಗ್ರಾಮ ಪಂಚಾಯ್ತಿ ರವರಿಂದ ನಿರ್ಮಿಸಲಾಗಿರುವ ನೀರಿನ ಘಟಕದಿಂದ ಮೇಲೆ ಹೇಳಿದ ವ್ಯಕ್ತಿಗಳಿಗೆ ನೀರಿನ ಸರಬರಾಜು ಆಗುತ್ತದೆ ಎಂದರೆ ಸರಿಯಲ್ಲ. ದಾವೆಯನ್ನು ದಾಖಲಿಸಿದ ನಂತರದಲ್ಲಿ ನಿಪಿ-8 ರಂತೆ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಈ ದಾವೆಯನ್ನು ದಾಖಲಿಸಲು ಯಾವುದೇ ವ್ಯಾಜ್ಯಾ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ದಾವೆಯನ್ನು ಹೂಡುವ ಪೂರ್ವದಲ್ಲಿ ಯಾವುದೇ ದೂರನ್ನು ದಾಖಲಿಸದೇ ಗ್ರಾಮ ಪಂಚಾಯ್ತಿಯವರು ನಿರ್ಮಿಸಿರುವ ನೀರಿನ ಘಟಕವನ್ನು ನನ್ನದಾಗಿಸಿಕೊಳ್ಳಬೇಕೆಂದು ದಾವೆ ಹೂಡಿದ ನಂತರದಲ್ಲಿನಿಪಿ-8 ರಂತೆ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆದ ಕಾರಣ ನನ್ನ ಅಜ್ಜಿಗೆ ಬಗರ್ ಹುಕುಂ ಅಡಿಯಲ್ಲಿ ಜಮೀನು ಮಂಜೂರಾಗಿರುವ ಕುರಿತು ಮತ್ತು ಸ.ನಂ.122 ರ ಸಂಪೂರ್ಣ ಮಾಹಿತಿಯ ದಾಖಲಾತಿಗಳನ್ನು ಹಾಜರುಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಗ್ರಾಮ ಪಂಚಾಯ್ತಿಯವರ ಕೆಲಸಕ್ಕೆ ಅಡ್ಡಿ ಮಾಡಲು ಮತ್ತು ಮೇಲೆ ಹೇಳಿದ ವ್ಯಕ್ತಿಗಳಿಗೆ ನೀರಿನ ಸರಬರಾಜನ್ನು ತಡೆಯುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿ.28.12.2022 ರಂದು ಪ್ರತಿವಾದಿಯವರು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ ಮತ್ತು ನಾನು ಸದರಿ ದಿನಾಂಕವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ವಿಭಾಗದ ಮುಖಾಂತರ ಬಂದಿರುವಂತಹ 3 ಎಕರೆ ಜಮೀನಿಗೆ ಮಾತ್ರ ದಾವೆಯನ್ನು ಹೂಡಿರುತ್ತೇನೆ. ನಾನು ಮತ್ತು ನನ್ನ ಸಹೋದರ, ಸಹೋದರಿಯರು ಕಣ್ಣಳತೆಯ ಮುಖಾಂತರ ವಿಭಾಗ ಮಾಡಿಕೊಂಡು ಸ್ವಾಧೀನದಲ್ಲಿರುತ್ತೇವೆ ಮತ್ತು ನಾನು 300 ರಿಂದ 350 ಗಿಡಗಳು ಇರುವಷ್ಟು ಜಾಗದ ಅನುಭವದಲ್ಲಿರುತ್ತೇನೆ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಸರ್ಕಾರಿ ಅಭಿಯೋಜಕರು ಹಾಜರಾಗಿ ತಮ್ಮ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ**

**<u>ಎಂದು ನುಡಿದಿರುತ್ತಾರೆ.</u>**

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.